# ನಾಮಧಾರಿ ಸಮುದಾಯದ ಸಾಂಸ್ಕೃತಿಕ ಅಧ್ಯಯನ

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

**ಸ್ನಾತಕೋತ್ತರ ಕನ್ನಡ ಪದವಿ (ಎಂ.ಎ)**


ಸಂಶೋಧಕರು

**ಹರೀಶ ನಾಯ್ಕ**

ರಿಜಿಸ್ಟರ್ ನಂ; 18A01002

ಮಾರ್ಗದರ್ಶಕರು

**ಡಾ|| ಸುರೇಶ್ ಎನ್. ನಾಯ್ಕ**

ಕನ್ನಡ ಉಪನ್ಯಾಸಕರು

ಅಂಜುಮನ್ ಕನ್ನಡ ಸ್ನಾತಕೋತ್ತರ ಕೇಂದ್ರ ಭಟ್ಕಳ, ಉತ್ತರ ಕನ್ನಡ.


ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಎಂ.ಎ ಪದವಿಯ ನಾಲ್ಕನೇ ಸೆಮಿಸ್ಟರ್‌ಗಾಗಿ
ಒಪ್ಪಿಸಲಾದ ಸಂಶೋಧನಾ ಕಿರುಪ್ರಬಂಧ

ಅಂಜುಮನ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ ಹಾಗೂ
ಸ್ನಾತಕೋತ್ತರ ಕೇಂದ್ರ ಭಟ್ಕಳ, ಉತ್ತರ ಕನ್ನಡ – 581320

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

2020

**ಕರ್ನಾಟಕ ವಿಶ್ವ ವಿದ್ಯಾಲಯ**

**ಧಾರವಾಡ**

# ಪ್ರಮಾಣ ಪತ್ರ

ನಾಮಧಾರಿ ಸಮುದಾಯದ ಸಾಂಸ್ಕೃತಿಕ ಅಧ್ಯಯನ ಎಂಬ ಕಿರು ಸಂಶೋಧನಾ ಪ್ರಬಂಧವನ್ನು ವಿದ್ಯಾರ್ಥಿಯಾದ ಹರೀಶ ನಾಯ್ಕ ಇವರು ಎಂ. ಎ ಕನ್ನಡ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಡಾ॥ ಆರ್.ಸಿ. ಹೀರೆಮಠ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಾದರ ಪಡಿಸಿದ್ದಾರೆ. ಪ್ರಸ್ತುತ ಕಿರು ಪ್ರಬಂಧ ಈ ಮೊದಲು ಇಡಿಯಾಗಿ ಇಲ್ಲವೇ ಬಿಡಿಯಗಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ದೃಢಿಕರಿಸುತ್ತೇನೆ.

ದಿನಾಂಕ: 15/09/20

ಸ್ಥಳ : ಭಟ್ಕಳ

ಮಾರ್ಗದರ್ಶಕರು

ಡಾ॥ ಸುರೇಶ ಎನ್. ನಾಯ್ಕ

ಉಪನ್ಯಾಸಕರು

ಅಂಜುಮನ್ ಸ್ನಾತಕೋತ್ತರ ಕೇಂದ್ರ,

ಭಟ್ಕಳ (ಉ.ಕ)

# ಪರಿವಿಡಿ


| ಅ.ನಂ | ವಿಷಯ ಸೂಚಿ | ಪುಟ ಸಂಖ್ಯೆ |
|---|---|---|
| 1 | ಅಧ್ಯಾಯ –1<br>ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ | 1–2 |
| 2 | ಅಧ್ಯಾಯ – 2<br>ಭೌಗೋಳಿಕ ಪರಿಸರ ಶೋಧ | 2–6 |
| 3 | ಅಧ್ಯಾಯ – 3<br>ಸಾಮಾಜಿಕ ವ್ಯವಸ್ಥೆ | 7–16 |
| 4 | ಅಧ್ಯಾಯ – 4<br>ಆರ್ಥಿಕ ಜೀವನ | 17–18 |
| 5 | ಅಧ್ಯಾಯ – 5<br>ಸಂಪ್ರದಾಯ ಮತ್ತು ನಂಬಿಕೆಗಳು | 19–23 |
| 6 | ಅಧ್ಯಾಯ – 6<br>ಧಾರ್ಮಿಕ ಜೀವನ ಮತ್ತು ಆಚರಣೆಗಳು | 24–30 |
| 7 | ಅಧ್ಯಾಯ–7<br>ಭಾಷೆ ಮತ್ತು ಸಾಹಿತ್ಯ | 31–38 |
| 8 | ಪರಿವರ್ತನೆ | 39–41 |
| 9 | ಸಾರಾಂಶ | 42 |
| 10 | ನಾಮದಾರಿ ಸಮೂದಾಯದ ಸಾಂಸ್ಕೃತಿಕ ಛಾಯಾ ಚಿತ್ರಗಳು | 43–49 |
| 11 | ಆಧಾರ ಗ್ರಂಥಗಳು | 50 |

## ಸಮಾರೋಪ

ಮೂಲತಃ ವಿಜಯನಗರ ಅರಸರ ಆಶ್ರಯದಲ್ಲಿ ಅವರ ಕೋಟೆಗಳ ಸಂರಕ್ಷಕರಾಗಿ ಗುರುತಿಸಿಕೊಂಡು ನಂತರ ಮಹಾರಾಷ್ಟ್ರದ ರತ್ನಗಿರಿ ಸಮೀಪವಿರುವ ವಿಜಯದುರ್ಗ, ಸಿಂಧು ದುರ್ಗದಲ್ಲಿಯ ಕೋಟೆಗಳ ಕಾವಲುಗಾರರಾಗಿ ನಂತರ ಗೋವಾದ ಬೇರೆ ಬೇರೆ ಭಾಗಗಳಲ್ಲಿ ವಾಸಿಸಿ ಅಲ್ಲಿ ಪೋರ್ಚುಗೀಸರ ಮತಾಂತರ ಚಳುವಳಿಗೆ ಬೇಸತ್ತು ಕರ್ನಾಟಕದ ಕರಾವಳಿ ಭಾಗವಾದ ಉತ್ತರ ಕನ್ನಡ, ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಮ್ಮ ಅರಸರ ಆಡಳಿತ ಕೊನೆಗೊಂಡ ನಂತರ ಬೇಟೆ, ಕೃಷಿ, ಪಶುಪಾಲನೆ, ಕೂಲಿ ಮೊದಲಾದ ವೃತ್ತಿಗಳನ್ನು ಜೀವನಾಧಾರವನ್ನಾಗಿಸಿಕೊಂಡು ಬದುಕುತ್ತಾರೆ. ಸಮುದಾಯದ ಸಾಮಾಜಿಕ ಸಂಬಂಧಗಳನ್ನು ನಂಬಿಕೆ ಸಂಪ್ರದಾಯಗಳಿಂದ ಬಲಪಡಿಸಿಕೊಂಡು ತಮ್ಮದೇ ಆದ ಆಡಳಿತ ವ್ಯವಸ್ಥೆಯಿಂದ ಜೀವಿಸುತ್ತಾರೆ. ಇವರು ಆರಾಧಿಸುವ ಸಾಂಸ್ಕೃತಿಕ ಅಂಶಗಳಲ್ಲಿ ಏಕತೆಯನ್ನು ಕಾಣಲು ಸಾಧ್ಯವಿದೆ. ಕರ್ನಾಟಕ ಹಾಗೂ ಹೊರರಾಜ್ಯಗಳಲ್ಲಿ ನೆಲೆನಿಂತಿರುವ ಬೇರೆ ಬೇರೆ ಕುಲನಾಮಗಳಿಂದ ಕರೆಯಲ್ಪಡುವ ನಾಮದಾರಿಗಳು ಒಂದೆ ಸಮುದಾಯದ ನಾಮದಾರಿಗಳು ಎಂದು ಅಧ್ಯಯನದಿಂದ ತಿಳಿದು ಬರುತ್ತಿದೆ.

ಈ ಸಮುದಾಯ ಕೂಲಂಕುಷವಾದ ಸಂಶೋಧನೆಗೆ ಒಳಗಾಗದೆ ಇರುವುದರಿಂದ ಸಂಸ್ಕೃತಿಯಲ್ಲಿ ಇವರ ಸ್ಥಾನಮಾನಗಳ ನೆಲೆಕಂಡುಕೊಳ್ಳುವ ಅವಶ್ಯಕತೆ ಮುಖ್ಯವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಸಮುದಾಯದ ಸಾಂಸ್ಕೃತಿಕ ವೈಶಿಷ್ಟ್ಯಗಳಲ್ಲಿ ಭಿನ್ನತೆಗಳಿದ್ದರೂ ಸಾಮಾಜಿಕ ಆಯಾಮಗಳಲ್ಲಿ ಆರ್ಥಿಕ, ರಾಜಕೀಯ, ಸಾಂಸ್ಕೃತಿಕವಾಗಿ ಸಮುದಾಯಕ್ಕೊಂದು ನೆಲೆ ಮತ್ತು ಸ್ಥಿರತೆಯ ಅವಶ್ಯಕತೆ ಇದೆ. ಈ ದೃಷ್ಟಿಯಿಂದ ನಾಮದಾರಿಯ ಜನಸಮುದಾಯದ ಕೊಡುಗೆಯು ಕರ್ನಾಟಕ ಸಂಸ್ಕೃತಿಗೆ ಮುಖ್ಯವೆನಿಸುತ್ತದೆ.